ಲೊಚಗುಟ್ಟಿದ್ದ ಸದ್ದು ಬಿದ್ದಿತ್ತು. ''ನೋಡಿದ್ರಾ, ಹಲ್ಲಿ ಲೊಚಗುಟ್ಟಿದ್ದು ಕೇಳಿಸಿಕೊಂಡ್ರ...'' ಎಂದು ಡಾಕ್ಟರ್ ಅತಾವುಲ್ಲಾ, ಬಂಡೀಗೌಡನ ಮುಖ ನೋಡಿದ್ದರು! ಅಯೋಮಯದಿಂದ ಅತಾವುಲ್ಲಾನು ''ಡಾಕ್ಟ್ರೆ ಏಡ್ಸ್ ಕಾಯ್ಲೆ ಅಂದ್ರೇನು...'' ಎಂದು ಕೇಳಿದ್ದ. ಅತಾವುಲ್ಲಾನ ಮಾತುಗಳಿಂದ ಡಾಕ್ಟರರಿಗೆ ಇನ್ನೆಲ್ಲಿ ತಿಕ್ಕಲು ರೇಗುವುದೋ ಎಂದು ಅರಿತ ಬಂಡೀಗೌಡನು, ''ನಾನೇಳ್ತೀನಿ ನಡ್ಯಣ್ಣ. ಸಿಕ್ಕ ಸಿಕ್ಕ ಹೊಲ್ದಾಗೆಲ್ಲ ಮೇಯೋ ದನಗಳಿಗೆ ಬರೋವಂತ ಕಾಯ್ಲೆ ಅದು...'' ಎಂದು ಪರಿಸ್ಥಿತಿಯನ್ನು ತಿಳಿಗೊಳಿಸಿದ್ದ ಬಂಡೀಗೌಡ.

ಅತಾವುಲ್ಲಾ, ಬಂಡೀಗೌಡ ಇಬ್ಬರೂ ಬುಡೇನ್ ಸಾಬಿಯನ್ನು ಹಿಡಿದುಕೊಂಡು ಬಂದು ಕಾರಿನ ಹಿಂದಿನ ಸೀಟಲ್ಲಿ ಮಲಗಿಸಿದ್ದರು. ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಅತಾವುಲ್ಲಾ ಹಿಂದೆ ಕುಳಿತ. ಬಂಡೀಗೌಡ ಕಾರು ಚಲಾಯಿಸತೊಡಗಿದ. ಬುಡೇನ್ ಸಾಬಿಗೆ ಬಾಯಿ ಒಣಗಿ ಮಾತು ಗಂಟಲಲ್ಲಿ ಸಿಕ್ಕಿ ಹಾಕಿಕೊಂಡಿತ್ತು. ಒಂದುತೊಟ್ಟು ಎಳೆನೀರು ಕುಡಿಯಲೂ ಕಾಲುಗಂಟೆ ತೆಗೆದುಕೊಂಡಿದ್ದ. ಕಾರು ಬೆಂಗಳೂರನ್ನು ಬಿಟ್ಟಾಗ ಸೂರ್ಯ ತಲೆ ಮರೆಸಿಕೊಳ್ಳಲು ತಯಾರಿ ನಡೆಸುತ್ತಿದ್ದ. ಅತಾವುಲ್ಲಾನೂ ಸೀಟಿಗೊರಗಿ ಕಣ್ಣು ಮುಚ್ಚಿದ. ಕಾರು ಕೊರಟಗೆರೆಯನ್ನು ತಟಾಯಿಸಿ ಅಕ್ಕಿರಾಂಪುರದ ಕಡೆ ಹೊರಳಿ ಮೂರ್ನಾಲ್ಕು ಕಿಲೋಮೀಟರ್ ಉರುಳಿದಾಗ ಬಂಡೀಗೌಡ ಕಾಲುಮಡಿಸಲೆಂದು ಕಾರು ನಿಲ್ಲಿಸಿ ಲೈಟ್ ಹಾಕಿದಾಗ ರಾತ್ರಿ ಎಂಟೂಕಾಲು ಗಂಟೆಯಾಗಿತ್ತು.

''ಅರೆ, ನಾನೂ ರೀಸಸ್ ಮಾಡ್ಬೇಕ್ ಇರಪ್ಪ...'' ಎಂದು ಬುಡೇನ್ ಸಾಬಿಯ ತಲೆಯನ್ನು ತೊಡೆಯ ಮೇಲಿಂದ ಸರಿಸಲು ಹೋದ ಅತಾವುಲ್ಲಾ. ತಲೆ ವಾಲಿಕೊಂಡಿತ್ತಲ್ಲದೆ ಬಾಯಿಂದ ರಕ್ತ ಜಿನುಗಿರುವುದು ಕಂಡು ''ಹೇ ಬುಡೇನ್ ಹೇ ಬುಡೇನ್...'' ಎಂದು ಕೂಗಿಕೊಂಡ. ಉಚ್ಚೆ ಮಾಡುತ್ತಿದ್ದ ಬಂಡೀಗೌಡ ''ಏನಾಯ್ತಣ್ಣ...'' ಎಂದು ಕೇಳಿದ್ದ. ಅತಾವುಲ್ಲಾ ಬುಡೇನ್ ಸಾಬಿಯ ಮೂಗಿನ ಹತ್ತಿರ ಬೆರಳುಗಳನ್ನಾಡಿಸಿ ''ಅರೆ ಇಸ್ಕಿ ಪ್ರಾಣ ಹೋಗ್ಬಿಟ್ಟೈತಣ್ಣ...'' ಎಂದು ತೊಡೆ ಸರಿಸುವುದಕ್ಕೂ ಬುಡೇನ್ ಸಾಬಿ ಕಾಲಿಟ್ಟಿದ್ದ ಬ್ಯಾಗಿನಿಂದ ಏನೋ ಉದುರುವುದಕ್ಕೂ ಒಂದೇ ಆಗಿತ್ತು. ಬಿದ್ದಿದ್ದು ಏನಿರಬಹುದೆಂದು ಅತಾವುಲ್ಲಾ ಆ ಕಡೆ ಕಣ್ಣು ಹೊರಳಿಸಿದ್ದ. ಕಾರಿನ ಲೈಟಿನ ಮಂದ ಬೆಳಕಲ್ಲಿ ಹಳೆಯದೊಂದು ಕೀಲುಗೊಂಬೆ ಸೀಟಿನ ಕೆಳಗೆ ಬೋರಲಾಗಿ ಬಿದ್ದಿತ್ತು.

### ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕಥೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಈ ತನಕ 15 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.